

# ಸೌಂದರ್ಯ ಸೋಪಾನ!



ಮಾಗಿಯ ಚಳಿಯಲ್ಲೂ ಮೈ ಬಿಸಿ ಏರಿಸುವ ವಾತಾವರಣ. ಸ್ವಯಂ ಚಾಲಿತ ಮೆಟ್ಟಿಲುಗಳಿಂದ ಒಬ್ಬೊಬ್ಬರೇ ಇಳಿದು ಬರುತ್ತಿದ್ದ ರೂಪದರ್ಶಿಯರು. ಕಪ್ಪು ಬಣ್ಣದ ಪಾಶ್ಚಾತ್ಯ ಉಡುಪು ಧರಿಸಿದ್ದ ಒಬ್ಬಾಕೆಯ ಮೈಮಾಟ ಆ ಉಡುಪಿನಿಂದ ಇನ್ನಷ್ಟು ಹೆಚ್ಚಿತ್ತು. ಅಲ್ಲಿದ್ದ ಬಹುತೇಕರು ವೈನ್ ಸವಿಯುತ್ತಲೇ ಫ್ಯಾಷನ್ ಶೋದಲ್ಲಿ ಕಣ್ಣು ನೆಟ್ಟಿದ್ದರು. ಸಂಜೆ ಪಾರ್ಟಿ ಎಂದರೆ ಇರಲೇಬೇಕಲ್ಲ ಮೋಜು, ಮಸ್ತಿ. ಅಲ್ಲಿ ಅವೆರಡೂ ಮೇಳೈಸಿದ್ದವು.

ಯುಬಿ ಸಿಟಿಯ ಸಭಾಂಗಣ ಫ್ಯಾಷನ್ ಪ್ರಿಯರಿಂದ ತುಂಬಿತುಳುಕುತ್ತಿತ್ತು. ಅವಿರಾಟೆ ಸೇರಿದಂತೆ ಹದಿನೈದಕ್ಕೂ ಹೆಚ್ಚು ಬ್ರಾಂಡ್‌ಗಳು ಆಯೋಜಿಸಿದ್ದ 'ಟ್ರೂಸೋ ವೀಕ್' ಎಂಬ ಈ ಫ್ಯಾಷನ್ ಶೋ ಶ್ರೀಮಂತವಾಗಿತ್ತು. ಸಭಾಂಗಣಕ್ಕೆ ವಿಶೇಷ ಮೆರುಗು ಬಂದಿತ್ತು. ಪ್ರತಿವರ್ಷದಂತೆ ಈ ಬಾರಿಯೂ ಯುಬಿ ಸಿಟಿ ಒಳಾಂಗಣದ ಸ್ವಯಂಚಾಲಿತ ಮೆಟ್ಟಿಲುಗಳೇ ರ‍್ಯಾಂಪ್ ಆಗಿದ್ದವು. ಸೌಂದರ್ಯ ಸೋಪಾನ!

ಮೊದಲು ರ‍್ಯಾಂಪ್ ಮೇಲೆ ಕಾಣಿಸಿಕೊಂಡವರು ಕಿಮಾಯ ಮದುವೆ ಸಂಗ್ರಹ ಧರಿಸಿದ ರೂಪದರ್ಶಿಗಳು. ಗೌರವ್ ಗುಪ್ತಾ, ತರುಣ್ ತೆಹಲ್ಯಾನಿ, ಶೇನ್ ಪಿಕಾಕ್, ನೀತಾ ಲುಲ್ಲಾ ಸೇರಿದಂತೆ 15ಕ್ಕೂ ಹೆಚ್ಚು ವಿನ್ಯಾಸಕರು ಸಿದ್ಧಪಡಿಸಿದ ಉಡುಪುಗಳನ್ನು ಪ್ರದರ್ಶಿಸಲಾಯಿತು.

ಲೆಹೆಂಗಾ, ವೆಲ್ವೆಟ್ ಲಾಂಗ್ ಜಾಕೆಟ್ ತೊಟ್ಟ ರೂಪದರ್ಶಿಯರು ಗಮನಸೆಳೆದರು. ಕಪ್ಪು–ಬಿಳುಪು, ನೀಲಿ ಹಾಗೂ ಬಿಳಿ ಮಿಶ್ರಿತ ಶಾರ್ಟ್ಸ್ ಧರಿಸಿದ್ದ ಅವರು ಮೆಟ್ಟಿಲುಗಳಿಂದ ಕೆಳಗೆ ಇಳಿಯುತ್ತಿದ್ದಂತೆ ಅಲ್ಲಿದ್ದ ಕ್ಯಾಮೆರಾಗಳೆಲ್ಲಾ ಕಣ್ಣು ಮಿಟುಕಿಸಲಾರಂಭಿಸಿದವು.

ಫ್ಯಾಷನ್ ಶೋ ನಡುವೆ ವಿದೇಶಿ ಕಲಾವಿದರು ಪ್ರದರ್ಶಿಸುತ್ತಿದ್ದ ರೋಮಾಂಚಕ ಬ್ಯಾಲೆ ನೃತ್ಯ ಮೈಜುಮ್ಮೆನಿಸುವಂತಿತ್ತು. ಶಾಪಿಂಗ್ ಮಾಡುತ್ತಿದ್ದ ಗ್ರಾಹಕರು ನೃತ್ಯ ಕಂಡು ಮೆಟ್ಟಿಲುಗಳ ಬಳಿ ಜಮಾಯಿಸಿದರು. ರಿಂಗ್‌ನೊಂದಿಗೆ ಹತ್ತು ನಿಮಿಷಕ್ಕೂ ಹೆಚ್ಚು ಕಾಲ ವಿವಿಧ ಕಸರತ್ತುಗಳನ್ನು ಪ್ರದರ್ಶಿಸುತ್ತಿದ್ದರೆ, ಬಾಯಿ ಮೇಲೆ ಕೈಇಟ್ಟುಕೊಂಡು ಆಶ್ಚರ್ಯದಿಂದ ರೆಪ್ಪೆ ಮಿಣುಕಿಸದೆ ನೋಡುತ್ತಿದ್ದರು. ನಂತರ ಆರಂಭವಾದದ್ದು ಅವಿರಾಟೆ ವಸ್ತ್ರಗಳನ್ನು ಧರಿಸಿದ ರೂಪದರ್ಶಿಯರ ವಯ್ಯಾರದ ನಡಿಗೆ.

'ಈ ಬಾರಿ 'ಅವಿರಾಟೆ ಮಿಸ್ ಫ್ರಾನ್ಸ್ ಸಂಗ್ರಹ'ವನ್ನು ಪ್ರರ್ದಶಿಸಲಾಗಿದೆ. ಅವಿರಾಟೆ ಬ್ರಾಂಡ್‌ನ ಮಿಸ್ ಫ್ರಾನ್ಸ್ ಸಂಗ್ರಹ ಧರಿಸಿದ 15 ಯುವತಿಯರು ಹೆಜ್ಜೆ ಹಾಕಿದ್ದಾರೆ. ಫ್ರಾನ್ಸ್‌ನಿಂದ ಈ ಸಂಗ್ರಹವು ಪ್ರಭಾವಿತಗೊಂಡಿದೆ. ಅವಿರಾಟೆ ಮಿಸ್ ಫ್ರಾನ್ಸ್ ಸಂಗ್ರಹದ ಬೆಲೆ ₹ 4,000ದಿಂದ ಆರಂಭವಾಗುತ್ತದೆ. ನಮ್ಮಲ್ಲಿ 300ಕ್ಕೂ ಹೆಚ್ಚಿನ ವಿನ್ಯಾಸದ ಉಡುಪುಗಳಿವೆ' ಎಂದು ಹೇಳುತ್ತಾರೆ ಅವಿರಾಟೆ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಜಹೀದ್ ಉಸ್ಮಾನ್.

ಎ.ಎಸ್. ಮೋತಿವಾಲ ಜ್ಯುವೆಲ್ಲರಿ ಅವರ ಒಡವೆ ಸಂಗ್ರಹಗಳನ್ನು ತೊಟ್ಟು ಕಾಣಿಸಿಕೊಂಡ ಮಾಡೆಲ್‌ಗಳದ್ದು ಮೊಗದೊಂದು ವಯ್ಯಾರ. ಬಂಗಾರ ಹಾಗೂ ಕಪ್ಪು ಬಣ್ಣದ ತುಂಡುಡುಗೆಗಿಂತ ಅವರ ಮೈಮೇಲಿನ ವಜ್ರಾಭರಣಗಳೇ ಕಣ್ಣು ಕೋರೈಸುವಂತ್ತಿದ್ದವು.

'ನಮ್ಮಲ್ಲಿ 185 ವಿನ್ಯಾಸಕರ ವಸ್ತ್ರಗಳಿವೆ. ಮದುವೆ ಉಡುಪುಗಳಿಗೆ ಹೇಳಿ ಮಾಡಿಸಿದ ವಸ್ತ್ರಗಳು. 20ರಿಂದ 45 ವರ್ಷದೊಳಗಿನ ಮಹಿಳೆಯರ ನೆಚ್ಚಿನ ಬ್ರಾಂಡ್ ಇದಾಗಿದೆ' ಎನ್ನುತ್ತಾರೆ ಕಿಮಾಯ ಅಧ್ಯಕ್ಷ ಪ್ರದೀಪ್ ಹಿರಾನಿ.

ಕಿಕ್ಕಿರಿದು ತುಂಬಿದ್ದ ಫ್ಯಾಷನ್ ಪ್ರಿಯರ ನಡುವೆ ನಡೆದ ಫ್ಯಾಷನ್ ಶೋ ಯುಬಿ ಸಿಟಿಯಲ್ಲಿ ಹಬ್ಬದ ವತಾವರಣ ಸೃಷ್ಟಿಸಿತ್ತು. ಶೋ ಮುಗಿಯುವ ವೇಳೆಗೆ ಬಾರ್ ಲಾಂಜ್‌ನಲ್ಲಿದ್ದ ವೈನ್ ಮತ್ತು ತಂಪು ಪಾನೀಯವೂ ಖಾಲಿಯಾಗಿತ್ತು.

⌘